ಪೇರೆಂಟ್ಸ್ ಬಂದ್ಮೇಲೆ ಈ ಮನೇಲ್ಲಿ ಸ್ಪೇಸ್ ಶಾರ್ಟಾಗ್ತದೆ... ನಾವ್ಹೇಗೋ ಸಹಿಸ್ಕೊಳ್ತೀವಿ... ಆದ್ರೆ ಕಂಜೆಸ್ಟೆಡ್..'

ಇನ್ನು ಮಾತಾಡಬೇಡ ಎಂಬರ್ಥದಲ್ಲಿ ಅನಂತಯ್ಯ ಸೊಸೆಯತ್ತ ಕೈಯಡ್ಡ ಮಾಡಿದ್ದೇ, ಮೋಹನನ ಮುಖ ನೋಡುತ್ತ ವ್ಯಂಗ್ಯ ಧ್ವನೀಲ್ಲಿ, 'ಅರ್ಥ ಆಯ್ತುಪ್ಪಾ... ನಾವ್ ಕುಮ್ಟೆಯ ಮನೆಗೆ ರಿಟರ್ನ್... ಹೋಗ್ಬೇಕೂಂತಾ.. ಅಷ್ಟೇ ಅಲ್ವಾ.. ನಿನ್ಹೆಂಡ್ತಿ ಮುಗುಮ್ಮಾಗಿ'.

ಅನ್ನುತ್ತ ಪಕ್ಕನೆ ಸ್ಮಿತಾಳ ಮುಖ ನೋಡಿದರೆ ಸೊಸೆಯ ತುಟಿಯಲ್ಲಿ ಹೌದೆಂಬರ್ಥದ ಮುಗುಳ್ನಗೆನೇ! ಅ ಕ್ಷಣ ಭವಾನಿನೇ 'ನಮ್ಮಿಂದ ನಿಮ್ಗೆ ತ್ರಾಸು ಆಗ್ತದೇಂತಾ ನಾ ಗ್ರಹಿಸ್ಲಂಡಿದ್ದೆ, ಥೋಡೆ ಕಾಲ ಹೆಂಗೋ ಸಹಿಸ್ಕೊಂಡಿದ್ರಾತೂಂತಾ..' ಇನ್ನಾಡೋದು ವ್ಯರ್ಥಾನ್ನಿಸಿತೇನೋ ಭವಾನಿ ಸ್ತಬ್ಧ. ಅನಂತಯ್ಯ ನಂತ್ರ ಮೃದು ದನೀಲ್ಲಿ 'ಆತು ಮೋಹನ್. ನಾ ನಾಳೆ ಬಸ್ ಸ್ಟ್ಯಾಂಡ್‌ಗೆ ಹೋಗಿ ಕುಮ್ಟೆಗೆ ಟಿಕೆಟ್ ತಕ್ಕಂಡ್'

'ಅದೆಲ್ಲ ಎಂಥದೂ ಬ್ಯಾಡಾಪ್ಪಾ.... ನಾಳೆ ರಾತ್ರಿ ರೈಲಿಗೆ ನಾ ಟಿಕೆಟ್ ತರ್ಸಿದೀನಿ... ಇಂಟರ್‌ನೆಟ್ ಬುಕಿಂಗ್... ತಕ್ಕಾ ಟಿಕೆಟ್!' ಎನ್ನುತ್ತ ಪ್ಯಾಂಟಿನ ಕಿಸೆಯಲ್ಲಿದ್ದ ಪರ್ಸ್ ಹೊರತೆಗೆದು ಟಿಕೆಟ್ ಎದುರಿಟ್ಟೇ ಬಿಟ್ಟ! ಅನಂತಯ್ಯಗೆ 'ಎಲಾ ಮಗನೇ.. ಏನ್ ಪ್ರೀಪ್ಲಾನೋ ನಿನ್ದು... ಸಾರ್ಥಕ ಆತು ಬಿಡು' ಅನ್ನಿಸಿಬಿಡ್ತು. ಟಿಕೆಟ್‌ನ ಕೌಂಟರ್ ಫಾಯಿಲ್ ಎತ್ತಿಕೊಂಡು ಕ್ಷಣಾರ್ಧ ನೋಡಿದರು. ಆ ಕ್ಷಣ ಭವಾನಿ, ರಾಗ ಎಳೆಯುತ್ತ, 'ಅಲ್ಲಪ್ಪಾ ಮೋಹನ್... ನಿನ್ ಮಾವ ಅತ್ತೆ ಬರ್‍ತಿದಾರೆ... ಖರೆ ಬರ್‍ಲಿ ಖುಷಿನೇ.. ಅವ್ರು ಎರಡ್ಮೂರ್ ವಾರ ಹೆಚ್ಚಂದ್ರೆ ತಿಂಗ್ಳ ನಂತ್ರ ಕೊಲ್ಲಾಪುರಕ್ಕೋ ... ಮುಂಬೈಗೋ ಹೆಂಗೂ ಹೋಗ್ತಾರಲ್ವಾ... ಅಲ್ಲೀವರ್‍ಗೆ ನಾವ್ ಇಷ್ಟು ದಿನ ತಡಕೊಂಡ್ಹಂಗೆಯಾ.. ಹೆಂಗೋ...'

ಸ್ಮಿತಾಗೆ ಅಸಹನೆಯ ಕಟ್ಟೆ ಧಸಾಲ್ ಆಯ್ತು. ಆ ಕ್ಷಣವೇ ಸ್ಮಿತಾ ಕೈಯಾಡಿಸುತ್ತ, 'ನೀವೆಲ್ಲ ಇಲ್ಲಿದ್ರೆ ಸ್ಪೇಸ್ ತುಂಬಾ ಕಂಜೆಸ್ಟೆಡ್ ಆಗ್ತದೇಂತಾ ನಾ ಹೇಳಿದ್ದು ಅತ್ತೆಮ್ಮಾ ಅರ್ಥ ಆಗ್ಲಿಲ್ವಾ.. ಸಣ್ ಮಕ್ಳಿಗೂ ಅರ್ಥ ಆಗ್ತದೆ!' ಅಂದೇ ಬಿಟ್ಟಳು. ಅನಂತಯ್ಯ 'ಭವಾನಿ ಹೆಂಗೂ ಟಿಕೆಟ್ ತಂದ್ಕೊಟ್ಟಿದಾನೆ... ನಿನ್ನಾಗ ನಮ್ಮನೆಗೆ ನಾವ್ ಹೊರಟ್ರಾತು. ಕಾಳಜಿ ಮಾಡಬ್ಯಾಡಾ. ಸೂಟ್‌ಕೇಸ್.. ಭರ್ತಿ ಮಾಡು... ಬದ್ಕಿದ್ರೆ ಇನ್ನೊಂದ್ಸಲ ಇಲ್ಲಿಗೆ ಬಂದ್ರಾತು. ಈಗ ಚರ್ಚೆ ಬ್ಯಾಡಾ ಮಾರಾಯ್ತಿ. ನಾಳೆ ಹೊರ್‍ಡೋಣ ಕುಮ್ಟೆಗೆ' ಅದು ನಿರ್ಧಾರಿತದ್ದೇ ಧ್ವನಿ. ಭವಾನಿ ರಸ ತೆಗೆದ ಕಬ್ಬಿನಂತಾದಳು. ಮರುದಿನ ರಾತ್ರಿ ಟ್ಯಾಕ್ಸಿನಲ್ಲಿ ರೈಲ್ವೆ ಸ್ಟೇಷನ್ ಮುಟ್ಟಿಸುವಂತೆ ಮೋಹನ್ ಏರ್ಪಾಡು ಮಾಡಿದ್ದ. ಅಂತೂ ಸೊಸೆ–ಮಗನ ದರ್ಶನ ಭಾಗ್ಯ ತಿಂಗಳೊಳಗೆ ಖತಮ್ಮಾಯ್ತು.

***

ಕುಮಟೆ ಮುಟ್ಟಿದ ನಂತರ ನೆನಪಾದಾಗೆಲ್ಲ ಅನಂತಯ್ಯ ಭವಾನಿ ಮಧ್ಯೆ ಮಾತು! ಮಾತು. ಮಾತಿನ ವಿಶ್ಲೇಷಣೆ –ಆರೋಪ–ಸಾಂತ್ವನ– ಎಲ್ಲ ಅಘನಾಶಿನಿ ಹೊಳೆಯಂತೆ ಮೋಹನ್–ಸ್ಮಿತಾಳ ಬಗೆಗೆ ಹರಿದು ಜರಿದು ಸೋರಿ ಹೋಯ್ತು.

ಇಂಗ್ಲೀಷ್‌ನಲ್ಲಿ ಅವತ್ತು ಪತ್ರಿಕೇಲಿ ಓದಿದ್ದ ಒಂದು ಜಾಹಿರಾತು, ಅನಂತಯ್ಯ ಗಗನಕ್ಕೇರಿದ ಪಕ್ಷಿ ಆದಂತೆ, 'ಸಮ ಕೇಳ್ಕಾ ಭವಾನಿ. ನಮ್ಗೂ ಹೆಲ್ತ್ ಕೈಕೊಡ್ತಿದೆ. ಯಾವಾಗ ಏನು ಅನ್ಲಿಕ್ಕಾಗಲ್ಲ ಇಬ್ರೂ ಬರಾಬರಿ ಶೀಕಿನವ್ರೇ.. ನಮ್ಗೆ ಪಿತ್ರಾರ್ಜಿತ ಆಸ್ತಿ ನಾಸ್ತಿ! ಮಗನ ಕಥೆ ನೋಡ್ದೆಯಲ್ಲಾ ಲವ್ ಮ್ಯಾರೇಜ್ ಮಾಡ್ಕಂಡವ್ರ ಹಣೆಬರಾನೇ ಹೀಂಗೆ, ಹೆಂಡ್ತಿಗೆ ಹೆದರಿ ಸರೆಂಡರ್ ಆಗಿರ್‍ತಾರೆ. ಅದ್ರಲ್ಲೂ ಮೋಹನ್ ಗುಮ್ಮನ ಗುಸ್ಕಾ. ಸೊಸೆಗೆ ನಾವು ಅಲರ್ಜಿ. ಹಾಂಗ್ಯಾಡಿ... ಈ ಓಲ್ಡ್ ಹೋಮೇಜ್ ಅಂದ್ರೆ ವೃದ್ಧಾಶ್ರಮಕ್ಕೆ ಹೋಗಿ ಸೇರ್‍ಕೊಳ್ಳೋಣ.. ಈ ಮನೆ ಹೆಂಗೂ ಬಾಡಿಗೇದು... ಕಮ್ಮೀನೆ ಹೌದು.. ಬ್ಯಾಡಾ.. ನಾ ನಿರ್ಧಾರ ಮಾಡಿ, ವೃದ್ಧಾಶ್ರಮಕ್ಕೆ ಪತ್ರ ಬರೆದಿಟ್ಟಿದೀನಿ... ಒಂದೆರ್‍ಡು ವಾರ್‍ದಲ್ಲಿ ಅವ್ರ ಕಬೂಲಿ ಬಂದ್ರೆ.. ಮುಂಬೈನ ವಾಶಿಯಲ್ಲಿ ಹೋಗಿದ್ಬಿಡೋಣ... ನಮ್ ಮುಖ ನೋಡೋ ಆಸೆಯಿದ್ದೋರು.. ಯಾರಿದ್ದಾರೆ? ಇವತ್ತೇ ಪೋಸ್ಟಿಗೆ ಆ ಕಾಗ್ದ' ಅಂದಾಕ್ಷಣ ಭವಾನಿ ಹಾವು ಕಂಡವಳಂತೆ ಬೆಚ್ಚಿ ಬಿದ್ದು, ಅದೇ ಭೀತ ಭಾವದಲ್ಲಿ,

'ಹ್ಞಾಂ... ಹ್ಞಾಂ... ಆತು ನೀವೆಲ್ಲಿಗೆ ಅಂತಿರೋ.. ನಾ ಅಲ್ಲಿಗೆ ರೆಡಿ.. ಆದ್ರೆ ನಿಮ್ ಪೆನ್ಶನ್ ಗತಿ ಏನು?'



'ಅಯ್ಯೋ ಈಗ ಎಲ್ಲಿ ಬೇಕಾರ ದುಡ್ಡು ವಿತ್‌ಡ್ರಾ ಮಾಡ್ಬಹ್ದು ಭವಾನಿ... ಎ.ಟಿ.ಎಂ. ಉಂಟಲ್ಲ..!'

–ಹೌದಲ್ಲಾನ್ನಿಸ್ತು. ಅವಳೇ ಥಕ್ಕನೆ ನೆನಪಾಯ್ತಲ್ಲ;

'ವೃದ್ಧಾಶ್ರಮದವ್ರು.. ಡಿಪಾಸಿಟ್ ಕೇಳ್ತಾರೆ... ಇಬ್ರಿಗೆ ಅಂದ್ಮೇಲೆ... ಒಂದೆರ್‍ಡು ಲಕ್ಷ ಡಿಮಾಂಡ್ ಮಾಡಿದ್ರೆ.. ಅದಕ್ಕೇನ್ ವ್ಯವಸ್ಥೇಂತಾ?'

'ಕಮ್ಮಿ ಬಿದ್ರೆ... ನಿನ್ ಬಂಗಾರದೊಡವೆ ಉಂಟಲ್ಲಾ...!'

'ಆತು, ಸಮ ನಿರ್ಧಾರ ಮಾಡ್ಕಂಡ್ ಪತ್ರ ಹಾಕ್ಬಿಡಿ. ಇಬ್ರೆ ಇಲ್ಲಿದ್ಕೊಂಡ್ ಪುಣ್ಯ ಗುಡ್ಡೆ ಹಾಕೋದ್ ಅಷ್ಟರಲ್ಲೇ ಇದೆ..' ಹೆಂಡತಿ ಎಲ್ಲಿ ಅಪಸ್ವರ ಎಳೀತಾಳೋಂತಾ ಅನಂತಯ್ಯನಿಗೆ ಮೊನ್ನೆಯಿಂದ್ಲೂ ದುಕುದುಕು ಇತ್ತು, ಈಗ ನಿರಾಳ. ಬೆಂಗ್ಳೂರಿಂದ ಬಂದ ಮೂರು ತಿಂಗ್ಳಾತು. ಹೇಗಿದೀರೀಂತಾ ಮುದ್ದು ಮಗ–ಸೊಸೆ ಎರ್‍ಡು ವಾಕ್ಯ ಕೇಳ್ಲಿಲ್ಲ. ಇಷ್ಟು ಅಕ್ಕರೇಲಿ..' ಅನಂತಯ್ಯನಿಗೆ ಹೀಗನ್ನಿಸಿದ್ರೂ ಭವಾನಿಗೆ ಧೈರ್ಯ ಉಹುಂ.

ನಿಧಾನ ನಡೆದುಕೊಂಡೇ ಅನಂತಯ್ಯ ಅಂಚೆ ಕಚೇರಿಯ ಎದುರಿದ್ದ ಕೆಂಪು ಪೆಟ್ಟಿಗೆಗೆ ಕವರು ನೂಕಿ ಬಂದರು ಅಂತಾಯ್ತು. ಹೊಸ ಬದುಕು ಆರಂಭಿಸೋ ಉತ್ಸಾಹದಲ್ಲಿ ಏನೇನೋ ಭಾವನಾ ಅಲೆಯಲ್ಲಿ ಮಿಂದೆದ್ದರು. ಗೆಳೆಯ ವಿಠ್ಠಲ ನಾಯ್ಕರ ಮನೆಗ್ಹೋಗಿ ಅರ್ಧ ತಾಸು ಕೂತು ಚಾ ಕುಡಿದು ಅನಂತಯ್ಯ ನಡೆದ ಹಕೀಕತ್ತು ಸೂಕ್ಷ್ಮವಾಗಂದು ಹಿಂದಿರುಗಿದರು.

ಮನೆಗೆ ಬಂದರೆ ಗೇಟಿನ ಬಳಿ ಮೋಹನ್ ನಿಂತಿದ್ದಾನೆ ತಂದೆಯನ್ನೇ ಕಾಯುತ್ತ! ಅನಂತಯ್ಯನಿಗೆ ಪರಮಾಶ್ಚರ್ಯ... ಏನೋ... ಮಾರಾಯಾ ಒಂದ್ ಫೋನ್ ಸಹ ಮಾಡ್ದೇ ಮೂರ್‍ನಾಲ್ಕು ತಿಂಗ್ಳಿಂದ ತಣ್ಣಗಿದ್ದೋನು!?' ಅಂತಂದಾಗ ಒಳಗೆ ಬರುವಂತೆ ಮೋಹನ್ ಸಂಜ್ಞೆ ಮಾಡಿದ.  ತಂದೆ ಕಚೇರಿಗೆ ಹೊರಟ ಎರ್‍ಡೇ ನಿಮಿಷಕ್ಕೆ ಮೋಹನ್ ರಿಕ್ಷಾದಲ್ಲಿ ಬಂದಿದ್ದ ಅಂತಾ ಭವಾನಿ ಬಣ್ಣಿಸಿದಳು.

'ಅಪ್ಪಾ'

–ಯಾಕೋ ವಾಕ್ಯ ಪೂರೈಸೋವಷ್ಟು ಧೈರ್ಯ ಇಲ್ಲದ ಮೋಹನ್ ಏಕದಂ ಬಿಕ್ಕಳಿಸಿ ಸಣ್ಣ ಮಕ್ಕಳಂತೆ ಅಳಲಿಕ್ಕೇ ಆರಂಭಿಸಿದ! ಆ ದೃಶ್ಯ ಏನೂಂತಾನೇ ಅರ್ಥವಾಗದ ಅನಂತಯ್ಯ, 'ಮೋಹನ್... ಅದೇನಾತು... ಮೊದ್ಲು ಹೇಳಪ್ಪಾ...' ಎನ್ನುತ್ತ ಧೈರ್ಯ ತುಂಬಿದರು. ಮೋಹನ್ ಆ ದುಃಖೋನ್ಮಾದದ ಮಧ್ಯೆಯೇ ತಡವರಿಸುತ್ತ,

'ಹೋದ ವಾರ ಸ್ಮಿತಾಗೆ ಅಬಾರ್ಷನ್ ಆಯ್ತು. ರಜೆ ತಕ್ಕೊ ಅಂದ್ರು ಕೇಳದೆ ನಿನ್ನೆ ಆಫೀಸಿಗೆ ಹೊರಟಾಗ ಹಿಂಬದೀಂದ ಇವ್ಳ ಸ್ಕೂಟಿಗೆ ಒಂದ್ ಕ್ಯಾಬ್ ಸ್ಪೀಡ್‌ನ್ನಲ್ಲಿದ್ದಂತೆ ಬಂದು ಹಿಂದಿದ ಗುದ್ದಿದಾನೆ, ಇವ್ಳು ನೆಲಕ್ಕೆ ಬಿದ್ಲು.. ಅವ್ಳ ಪರ್ಸ್‌ನಲ್ಲಿದ್ದ ನಂಬರ್ ನೋಡ್ಕಂಡ್ ಯಾರೋ ನಂಗೆ ಫೋನ್ ಮಾಡಿದ್ರು... ಆ ಹೊತ್ತಿಗಾಗ್ಲೇ ಪೋಲೀಸ್ನವ್ರೇ ಸ್ಮಿತಾಗೆ ಹತ್ತಿರ್‍ದ ಹಾಸ್ಪಿಟಲ್‌ಗೆ ಸೇರಿಸಿಯಾಗಿತ್ತು. ಎಲ್ಲ ಗ್ರಾಚಾರ. ಆರ್ಥೋಪೆಡಿಕ್ ಸರ್ಜನ್‌ರು ಕಾಲಿನ ಮೂಳೆ ಮುರಿದಿದೆ... ಸ್ವಲ್ಪ ಕಾಂಪ್ಲಿಕೇಟೆಡ್ ಕೇಸ್.. ಬೆಡ್ ರೆಸ್ಟ್... ಆಪ್ರೇಷನ್ ಎಲ್ಲ ಆಗ್ಬೇಕು ಅಂದಿದಾರೆ! ಪಕ್ಕದ್ಮನೆ ಜಯಲಕ್ಷ್ಮೀಗೆ ದಮ್ಮಯ್ಯಾಂತ್ಹೇಳಿ ನಿಲ್ಲಿಸಿ ಓಡ್ಬಂದಿದೀನಿ!'

ಈಗಲೂ ಮೋಹನ್ ದುಃಖದಲ್ಲಿ ಉಮ್ಮಳಿಸುತ್ತಲೇ ಮತ್ತೆ, 'ನೀವಿಬ್ರೂ ನನ್ನೊತೆ ಬರ್‍ಬೇಕು. ಫೋನ್ನಲ್ಲಿ ಕೇಳಿದ್ರೆ ನೀವ್ ನನ್ ರಿಕ್ವೆಸ್ಟ್ ರಿಜೆಕ್ಟ್ ಮಾಡ್ತೀರಿಂತಾ ಗೊತ್ತಾತು. ಹಾಂಗ್ಮಾಡಿ ಬಾಡಿಗೆ ಕಾರ್ ಮಾಡ್ಕೊಂಡ್ ನಾನೇ ಬಂದೀನಿ... ಸ್ಮಿತಾನೆ ಇನ್ವೈಟ್ ಮಾಡಿದಾಳೆ... ನಮ್ಮ ತಪ್ಪೇನಿದ್ರೂ ನೀವ್ ದೊಡ್ಡೋರು ಹೆತ್ತು ಹೊತ್ತ ತಾಯ್ತಂದೆ ... ಕ್ಷಮಿಸ್ಬಿಡಿ... ಇನ್ಮುಂದೆ ನಮ್ಜೊತೆನೇ ಇರ್‍ಬೇಕು.. ಬರ್‍ತೀರಲ್ವಾ?'

ಅವನ ಧ್ವನಿಯೇ ದುಃಖದಲ್ಲಿ ಆರ್ತತೆ ಬಿಂಬಿಸಿದೆ. ಭವಾನಿ ಗಂಡನ ಮುಖ ನೋಡುತ್ತ,

'ಅಲ್ಲಾರೀ ಇಂಥಾ ಕಷ್ಟಕಾಲ್ದಲ್ಲಿ ನಾವ್... ಇವ್ರ ಆಸರೆಗೆ ನಿಲ್ದಿದ್ರೆ... ತಾಯ್ತಂದೇಂತಾ ಅನ್ನಿಸ್ಕೊಂಡ್ ಏನ್ ಪ್ರಯೋಜ್ನ ಅಲ್ವಾ? ಆಗಿದ್ದಾತು. ಭಗ್ವಂತಾ ಮಾಡ್ಸಂಗಾಗ್ತದೆ ಅನ್ಕಂಡ್ ಇವ್ನ ಮನೆಗೆ ಹೊರಟು ಬಿಡೋಣಾರೀ. ಅರೆ ಸೆಕೆಂಡ್ ಮೌನದ ನಂತರ ಅನಂತಯ್ಯ ಮಗನ ಮುಖ ದಿಟ್ಟಿಸಿ ಮೆದು ದನೀಲ್ಲಿ 'ಆಯ್ತುಪ್ಪಾ... ಬರ್‍ತೀವಿ.. ಇದು ಲಾಸ್ಟ್ ಛಾನ್ಸ್. ಆತು ರೆಡಿ ಮಾಡು' ಅಂದಾಗ ಮಗನ ಮುಖಾರವಿಂದ ತೃಪ್ತಿಯ ತಂಗಿರಣ ಚಿಮ್ಮಿಸ್ತು.